ಸುಮಾರು 2,421 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ನೀವು ಬಿಡುಗಡೆ ಮಾಡಿರುವುದು ಬರೀ 811 ಕೋಟಿ ರೂಪಾಯಿಗಳನ್ನು ಮಾತ್ರ. ನಿಗದಿಪಡಿಸಿರತಕ್ಕಂಥಾದ್ದು 3,232 ಕೋಟಿ. ಅದರಲ್ಲಿ ಇದುವರೆಗೆ ತಾವು ಬಿಡುಗಡೆ ಮಾಡಿರುವುದು ಬರೀ 811 ಕೋಟಿ ರೂಪಾಯಿಗಳು. ಇನ್ನೂ 2,421 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ದಯವಿಟ್ಟು ತಕ್ಷಣ ತಾವು ಹಣವನ್ನು ಬಿಡುಗಡೆ ಮಾಡಬೇಕು ಎಂದು ನಾನು ಮನವಿ ಮಾಡುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಪ್ರತಿಪಕ್ಷದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇತರೆ ಸದಸ್ಯರು ಹೇಳಿದಂಥ ಸಲಹೆಗಳೇನಿವೆ ಅವುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿ ತಿಂಗಳು ಹಣ ಬಿಡುಗಡೆ ಮಾಡುವಂಥದ್ದು, ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡುವಂಥದ್ದು, ಫೆಬ್ರವರಿ ಮೊದಲನೇ ವಾರದಲ್ಲಿಯೇ ಡಿಸೆಂಬರ್ ಕೊನೆಯವರೆಗೆ ಏನಾಗಿದೆ, ಏನಾಗಬೇಕೆನ್ನುವುದನ್ನು ಕುಳಿತು ಮರು ಪರಿಶೀಲನೆ ಮಾಡಿ, review ಮಾಡಿ, ಇದಕ್ಕೆ ಆದ್ಯತೆ ಕೊಟ್ಟು ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೂಚನೆ ಕೊಟ್ಟು, ಪ್ರತಿಯೊಂದು ಜಿಲ್ಲೆಯಲ್ಲಿ SC/ST ಗೆ ಇಟ್ಟಿರುವ ಹಣದಲ್ಲಿ ಎಷ್ಟು ಖರ್ಚಾಗಿದೆ, ಖರ್ಚಾಗದಿದ್ದರೆ ತಡವಾಗಿರುವುದಕ್ಕೆ ಕಾರಣವೇನು ಮತ್ತು ಅದನ್ನು warfooting ನಲ್ಲಿ ಕೆಲಸ ಮಾಡಬೇಕೆನ್ನುವ ಸೂಚನೆ ಕೊಡುತ್ತೇನೆ. ಆ ಕಡೆಗೆ ಗಮನವನ್ನು ನಾನು ಕೊಡುತ್ತೇನೆ.

ಇ) ವಿಷಯ :- ಬಿಜಾಪುರ ಜಿಲ್ಲೆಯ ಚಿಮ್ಮಲಗಿ, ಮುಳವಾಡ ಹಾಗೂ ಇಂಡಿ ಏತ ನೀರಾವರಿ ನೀರಾವರಿ ಹಾಗೂ ಕುಡಿಯುವ ನೀರಿನ ತೊಂದರೆ ಕುರಿತು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) :- ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಚಿಮ್ಮಲಗಿ, ಮುಳವಾಡ ಹಾಗೂ ಇಂಡಿ ಏತ ನೀರಾವರಿ ಯೋಜನೆಗಳ ಕಾರ್ಯ ಪೂರ್ಣಗೊಳ್ಳದೆ ಇರುವುದು ಹಾಗೂ ಜಿಲ್ಲೆಯು ಸತತ ಬರಗಾಲಕ್ಕೆ ತುತ್ತಾಗಿ ರೈತರಿಗೆ, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತದೆ.

1) ಮುಳವಾಡ ಏತ ನೀರಾವರಿ ಯೋಜನೆ :-

ಕೃಷ್ಣಾ ಮೇಲ್ದಂಡೆ ಯೋಜನೆ ಸ್ಕೀಂ-ಎ ರಡಿ ಸುಮಾರು 8.50 ಟಿಎಂಸಿ ನೀರನ್ನು ಬಳಸಿ ಆರ್‌ಎಲ್ 560 ಮೀ. ಮಟ್ಟದವರೆಗೆ ನೀರನ್ನು ಎರಡು ಹಂತದಲ್ಲಿ ಲಿಫ್ಟ್ ಮಾಡಿ ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿ ಮತ್ತು ಬಿಜಾಪೂರ ತಾಲ್ಲೂಕು ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನಡಿ ಒಟ್ಟು 30,850 ಹೆ.ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಈಗಾಗಲೇ ಈ ಯೋಜನೆಯ ಮೊದಲನೆ ಹಂತದ ಬಳೂತಿ ಲಿಫ್ಟ್ ಮುಖ್ಯ ಸ್ಥಾವರ ಹಾಗೂ ಎರಡನೆ ಹಂತದ ಹನುಮಾಪುರ ಲಿಫ್ಟ್‌ನ ಮುಖ್ಯ ಸ್ಥಾವರದ ಕಾಮಗಾರಿ, 5 ಕಿ.ಮೀ ಉದ್ದದ ಲೀಡ್ ಆಫ್ ಕೆನಾಲ್, 17.40 ಕಿ.ಮೀ ಉದ್ದದ ಪೂರ್ವ ಕಾಲುವೆ ಮತ್ತು 78.00 ಕಿ.ಮೀ ಉದ್ದದ ಪಶ್ಚಿಮ ಕಾಲುವೆ ಪೂರ್ಣಗೊಳಿಸಲಾಗಿದ್ದು, ಕಾಲುವೆಯ ಜಾಲದಲ್ಲಿ ನೀರನ್ನು ಹರಿಬಿಡಲಾಗಿದೆ. ಒಟ್ಟಾರೆ ನಿಗದಿತ 30,850 ಹೆ.ನೀರಾವರಿ ಕ್ಷೇತ್ರದ ಪೈಕಿ ಡಿಸೆಂಬರ್ 2008ರ ಅಂತ್ಯಕ್ಕೆ 21,722 ಹೆ.ರಷ್ಟು ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. ಸದರಿ ಯೋಜನೆಯ ಕೃಷ್ಣಾ ನದಿಯ ದಡದಲ್ಲಿ ಬರುವ ಕಾಲುವೆ ಜಾಲದ ವ್ಯಾಪ್ತಿಯಲ್ಲಿ ಕೆಲ ರೈತರು ಈಗಾಗಲೇ ತಮ್ಮ ಸ್ವಂತ ಪಂಪ್‌ಸೆಟ್ ಬಳಸಿ ನೀರಾವರಿ ಸೌಲಭ್ಯ ಪಡೆಯುತ್ತಿದ್ದು, ಸದರಿ ಯೋಜನೆಯ ಒಟ್ಟಾರೆ ನಿಗದಿತ ನೀರಾವರಿ ಸಾಮರ್ಥ್ಯದ ಕ್ಷೇತ್ರದಲ್ಲಿ ಉಳಿತಾಯವಾಗಲಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿ ರಡಿ ಮುಳವಾಡ ಏತ ನೀರಾವರಿ ಯೋಜನೆಗಾಗಿ 54.431 ಟಿಎಂಸಿ ನೀರಿನ ಹಂಚಿಕೆ ನಿರೀಕ್ಷಿಸಲಾಗಿದ್ದು, ಯೋಜನೆಯಡಿ ಆರ್.ಎಲ್. 560.00 ಮೀ. ಮಟ್ಟದಿಂದ ಆರ್.ಎಲ್.640.00 ಮಟ್ಟದವರೆಗೆ 2 ಹಂತದಲ್ಲಿ ನೀರನ್ನು ಎತ್ತಿ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ, ಸಿಂಧಗಿ, ಇಂಡಿ, ಬಿಜಾಪೂರ ತಾಲ್ಲೂಕು ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಮತ್ತು ಗುಲಬರ್ಗಾ ಜಿಲ್ಲೆಯ ಸುರಪೂರ ತಾಲ್ಲೂಕಿನಡಿಯ ಒಟ್ಟಾರೆ ಸುಮಾರು 2.28 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಕೃಷ್ಣಾ ಕಣಿವೆಯ ಸ್ಕೀಂ-ಬಿ ರಡಿ ನೀರಿನ ಹಂಚಿಕೆ ಕುರಿತಂತೆ ಕೃಷ್ಣಾ ನ್ಯಾಯಾಧೀಕರಣ ರಚನೆಗೊಂಡಿದ್ದು, ನ್ಯಾಯಾಧೀಕರಣದ ಕಲಾಪಗಳು ಜರುಗುತ್ತಿದೆ. ಪೂರ್ವ ಸಿದ್ಧತಾ ಕ್ರಮವಾಗಿ ಈಗಾಗಲೇ ಮುಳವಾಡ ಏತ ನೀರಾವರಿ ಯೋಜನೆ ಸ್ಕೀಂ-ಬಿ ರಡಿಯ ಸುಮಾರು 2.83 ಲಕ್ಷ ಹೆಕ್ಟೇರ್ ಕ್ಷೇತ್ರದ (ಜಿ.ಸಿ.ಎ) ಟೋಪೋಗ್ರಾಫಿಕಲ್ ಸರ್ವೆ

ಕಾಮಗಾರಿಯನ್ನು ಮೆ. ಕೆಡಾನ್ ಸರ್ವೆ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ರೂ.2.76 ಕೋಟಿ ಟೆಂಡರ್ ಮೊತ್ತಕ್ಕೆ ಡಿಸೆಂಬರ್ 2008ರಲ್ಲಿ ವಹಿಸಲಾಗಿದ್ದು, ಸರ್ವೆ ಕಾರ್ಯ ಪ್ರಾರಂಭಗೊಂಡಿರುತ್ತದೆ. ಸದರಿ ಸರ್ವೆ ಕಾರ್ಯವನ್ನು ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

2. ಚಿಮ್ಮಲಗಿ ಏತ ನೀರಾವರಿ ಯೋಜನೆ :-

ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿ ರಡಿ ಚಿಮ್ಮಲಗಿ ಏತ ನೀರಾವರಿ ಯೋಜನೆಗಾಗಿ 20.781 ಟಿಎಂಸಿ ನೀರಿನ ಹಂಚಿಕೆ ನಿರೀಕ್ಷಿಸಿದ್ದು, ಸದರಿ ಯೋಜನೆಯಿಂದ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ, ಬಸವನ ಬಾಗೇವಾಡಿ, ಸಿಂಧಗಿ, ಇಂಡಿ, ಬಿಜಾಪೂರ ತಾಲ್ಲೂಕುಗಳು ಹಾಗೂ ಗುಲಬರ್ಗಾ ಜಿಲ್ಲೆಯ ಸುರಪೂರ ತಾಲ್ಲೂಕಿನಡಿ ಒಟ್ಟಾರೆ ಸುಮಾರು 87,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ. ಈಗಾಗಲೇ ಕೃಷ್ಣಾ ಕಣಿವೆಯಡಿ ಸ್ಕೀಂ-ಬಿ ರಡಿ ನೀರಿನ ಹಂಚಿಕೆ ಕುರಿತಂತೆ ಕೃಷ್ಣಾ ನ್ಯಾಯಾಧೀಕರಣ ರಚನೆಗೊಂಡಿದ್ದು, ನ್ಯಾಯಾಧೀಕರಣದ ಕಲಾಪಗಳು ಜರುಗುತ್ತಿದೆ.

ಮುಳವಾಡ ಏತ ನೀರಾವರಿ ಯೋಜನೆಯಡಿ ನಿಗದಿತ 30,850 ಹೆಕ್ಟೇರ್ ನೀರಾವರಿ ಸಾಮರ್ಥ್ಯದಲ್ಲಿ ಉಳಿತಾಯವಾಗಬಹುದಾದ ಕ್ಷೇತ್ರ ಹಾಗೂ ನೀರಿನ ಪ್ರಮಾಣವನ್ನು ಆಧರಿಸಿ, ಪ್ರಸಕ್ತ ಚಿಮ್ಮಲಗಿ ಏತ ನೀರಾವರಿ ಯೋಜನೆಯಲ್ಲಿನ ಜಾಕ್‌ವೆಲ್ ನಿರ್ಮಾಣ ಮತ್ತು ಪಶ್ಚಿಮ ಕಾಲುವೆ ನಿರ್ಮಾಣದೊಂದಿಗೆ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ಹಾಗೂ ಬಸವನ ಬಾಗೇವಾಡಿ ತಾಲ್ಲೂಕಿನ ಸುಮಾರು 4,314 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಈಗಾಗಲೇ ದಿನಾಂಕ : 21-06-2007 ರಂದು ಜರುಗಿದ ನಿಗಮದ 69ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಲಾಗಿರುತ್ತದೆ. ಮುಂದುವರೆದು, ಸರ್ಕಾರದ ಪತ್ರ ಸಂ.ಜಸಂಇ 126 ಕೆಬಿಎನ್ 2008 ದಿನಾಂಕ : 15-12-2008 ರಲ್ಲಿ ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ಆಗುತ್ತಿರುವ ಉಳಿತಾಯದಲ್ಲಿ, ಮುದ್ದೇಬಿಹಾಳ ತಾಲ್ಲೂಕಿನಲ್ಲಿ 4,314 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸಲು ಚಿಮ್ಮಲಗಿ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರ ಹಾಗೂ ಕಾಲುವೆ ಜಾಲದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ದೇಶನ ನೀಡಿದ್ದು, ಈಗಾಗಲೇ ಚಿಮ್ಮಲಗಿ ಏತ ನೀರಾವರಿ ಯೋಜನೆಯ ಮುಖ್ಯಸ್ಥಾವರದ ನಿರ್ಮಾಣ ಕಾಮಗಾರಿಗಾಗಿ ಟರ್ನ್ ಕೀ ಆಧಾರದ ಮೇಲೆ ರೂ.33.80 ಕೋಟಿ

ಮೊತ್ತಕ್ಕೆ ದಿನಾಂಕ : 05-01-2009 ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

3) ಗುತ್ತಿಬಸವಣ್ಣ ಏತ ನೀರಾವರಿ ಯೋಜನೆ (ಇಂಡಿ ಏತ ನೀರಾವರಿ ಯೋಜನೆ) :

ಕೃಷ್ಣಾ ಮೇಲ್ದಂಡೆ ಯೋಜನೆ ಸ್ಕೀಂ-ಎ ರಡಿ ಸುಮಾರು 11.90 ಟಿಎಂಸಿ ನೀರನ್ನು ಬಳಸಿ ಬಿಜಾಪೂರ ಜಿಲ್ಲೆಯ ಸಿಂಧಗಿ ಹಾಗೂ ಇಂಡಿ ತಾಲ್ಲೂಕಿನಡಿ ಒಟ್ಟು 41,900 ಹೆಕ್ಟೇರ್ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಈಗಾಗಲೇ ಈ ಯೋಜನೆಯ ಜಾಕ್‌ವೆಲ್ ಕಾಮಗಾರಿ ಹಾಗೂ 97.30 ಕಿ.ಮೀ ಉದ್ದದ ಮುಖ್ಯ ಕಾಲುವೆ ಮತ್ತು 40 ವಿತರಣಾ ಕಾಲುವೆ ವಿತರಣಾ ಕಾಲುವೆ (ವಿತರಣಾ ಕಾಲುವೆ ಸಂ.22 ಹೊರತುಪಡಿಸಿ) ಕಾಮಗಾರಿ ಪೂರ್ಣಗೊಳಿಸಿ ಕಾಲುವೆ ಜಾಲದಲ್ಲಿ ನೀರನ್ನು ಹರಿಸಲಾಗಿದೆ. ಒಟ್ಟಾರಿ ನಿಗದಿತ 41,900 ಹೆಕ್ಟೇರ್ ಕ್ಷೇತ್ರದ ಪೈಕಿ ಡಿಸೆಂಬರ್ 2008ರ ಅಂತ್ಯಕ್ಕೆ 41,813 ಹೆಕ್ಟೇರ್ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. ವಿತರಣಾ ಕಾಲುವೆ ಸಂ.22 ರಲ್ಲಿಯು ಬಾಕಿ ಉಳಿದ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿ ರಡಿ ಇಂಡಿ ಏತ ನೀರಾವರಿ ಯೋಜನೆಯ (ಗುತ್ತಿ ಬಸವಣ್ಣ ಏತ ನೀರಾವರಿ) ಕಿ.ಮೀ 97.30 ರಿಂದ ಕಿ.ಮೀ 147.00 ರವರೆಗಿನ ಮುಂದುವರೆದ ಕಾಮಗಾರಿಗಾಗಿ 4.90 ಟಿಎಂಸಿ ನೀರಿನ ಹಂಚಿಕೆ ನಿರೀಕ್ಷಿಸಲಾಗಿದ್ದು, ಯೋಜನೆಯಡಿ ಬಿಜಾಪೂರ ಜಿಲ್ಲೆಯ ಸಿಂಧಗಿ ಹಾಗೂ ಇಂಡಿ ತಾಲ್ಲೂಕುಗಳಲ್ಲಿ ಒಟ್ಟಾರೆ ಸುಮಾರು 20,690 ಹೆಕ್ಟೇರ್ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ. ಈಗಾಗಲೇ ಕೃಷ್ಣಾ ಕಣಿವೆಯಡಿ ಸ್ಕೀಂ-ಬಿ ರಡಿ ನೀರಿನ ಹಂಚಿಕೆ ಕುರಿತಂತೆ ಕೃಷ್ಣಾ ನ್ಯಾಯಾಧೀಕರಣ ರಚನೆಗೊಂಡಿದ್ದು, ನ್ಯಾಯಾಧೀಕರಣದ ಕಲಾಪಗಳು ಜರುಗುತ್ತಿದೆ.

ಈಗಾಗಲೇ ಸರ್ಕಾರದ ಪತ್ರ ಸಂ.ಜಸಂಇ 24 ಡಬ್ಲ್ಯೂಯುಸಿ 2004 ದಿನಾಂಕ : 18-09-2006 ರನ್ವಯ ಇಂಡಿ ಏತ ನೀರಾವರಿ ಯೋಜನೆ ಕಿ.ಮೀ 97.00 ರಿಂದ 147.00 ರವರೆಗಿನ ಕಾಮಗಾರಿ ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಈ ಹಿನ್ನೆಲೆಯಲ್ಲಿ ಕಿ.ಮೀ 97.30 ರಿಂದ 102.00 ರವರೆಗಿನ 5 ಕಿ.ಮೀ ಮುಖ್ಯ ಕಾಲುವೆ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ಒಟ್ಟು

ರೂ.12.77 ಕೋಟಿ ಮೊತ್ತಕ್ಕೆ ಜುಲೈ 2007ರಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಮುಖ್ಯ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಸದರಿ ಕೆ.ಮೀ 97.30 ರಿಂದ ಕೆ.ಮೀ 102.00 ರಡಿಯಲ್ಲಿ ಬರುವ ವಿತರಣಾ ಕಾಲುವೆ ಸಂ.41 ಹಾಗೂ ಸಂ.42 ರಡಿ ಬಿಜಾಪೂರ ಜಿಲ್ಲೆಯ ಸಿಂಧಗಿ ಹಾಗೂ ಇಂಡಿ ತಾಲ್ಲೂಕನಡಿಯ ಸುಮಾರು 3,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ವಿತರಣಾ ಕಾಲುವೆ ಕಾಮಗಾರಿಗಳಿಗಾಗಿ ಸುಮಾರು ರೂ.8.00 ಕೋಟಿ ಮೊತ್ತದ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ನಿಗಮದ ತಾಂತ್ರಿಕ ಉಪ ಸಮಿತಿಯ ಅನುಮೋದನೆ ಪಡೆದುಕೊಂಡು ಶೀಘ್ರದಲ್ಲೇ ಟೆಂಡರುಗಳನ್ನು ಕರೆಯಲಾಗುತ್ತಿದೆ. ಇದಲ್ಲದೇ, ಇಂಡಿ ವಿತ ನೀರಾವರಿ ಯೋಜನೆಯ ಮುಂದುವರೆದ ಕಾಲುವೆ ಕಾಮಗಾರಿಗಳ ಸರ್ವೆ ತನಿಖಾ ಕಾರ್ಯ ಹಾಗೂ ಅಂದಾಜು ಪತ್ರಿಕೆ ತಯಾರಿಕೆ ಕೆಲಸ ಪ್ರಗತಿಯಲ್ಲಿದೆ.

4. ಕುಡಿಯುವ ನೀರಿನ ಬಗ್ಗೆ :

ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಬಿಜಾಪೂರ ಜಿಲ್ಲೆಯಲ್ಲಿನ ಬರಗಾಲ ಪರಿಸ್ಥಿತಿ, ರೈತರು, ಜನರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಕುರಿತಂತೆ ಉಂಟಾಗುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕುಡಿಯುವ ನೀರಿನ ವಿಷಯವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳ ವ್ಯಾಪ್ತಿಗೆ ಒಳಪಡುತ್ತದೆಯಾದರೂ, ಪಟ್ಟಣ ಮತ್ತು ಇತರೆ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಬೇಡಿಕೆಗಳು ಬಂದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ, ಯೋಜನಾ ವರದಿಯಲ್ಲಿನ ಕುಡಿಯುವ ನೀರಿಗಾಗಿ ನಿಗದಿತ ನೀರಿನ ಹಂಚಿಕೆ ಪ್ರಮಾಣದನ್ವಯ ಆಲಮಟ್ಟಿ ಮತ್ತು ನಾರಾಯಣಪೂರ ಜಲಾಶಯದಿಂದ ನೀರನ್ನು ಎತ್ತಿ ಬಳಸಿಕೊಳ್ಳಲು ಅನುಮತಿ ನೀಡಲಾಗುತ್ತಿದೆ. ಇದೂವರೆಗೆ ಹೀಗೆ ಆಲಮಟ್ಟಿ ಜಲಾಶಯದಿಂದ 0.847 ಟಿಎಂಸಿ ಮತ್ತು ನಾರಾಯಣಪೂರ ಜಲಾಶಯದಿಂದ 0.219 ಟಿಎಂಸಿ, ಒಟ್ಟಾರೆ 1.066 ಟಿಎಂಸಿ ನೀರನ್ನು ಬಿಜಾಪೂರ ಜಿಲ್ಲೆಯ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನಕ್ಕಾಗಿ ಪಂಚಾಯತ್ ರಾಜ್ ಮತ್ತು ಇತರ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ. ಮುಂದುವರೆದಂತೆ ಮುಖ್ಯ ಇಂಜೀನಿಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ ಇವರ ಬೇಡಿಕೆಯಂತೆ ಬಿಜಾಪೂರ ಜಿಲ್ಲೆಯ 264 ಗ್ರಾಮಗಳಿಗೆ ಕೃಷ್ಣಾ ನದಿ, ಇಂಡಿ ಶಾಖಾ ಕಾಲುವೆ, ಆಲಮಟ್ಟಿ ಎಡದಂಡೆ ಕಾಲುವೆ,

ನಾರಾಯಣಪೂರ ಎಡದಂಡೆ ಕಾಲುವೆಗಳಿಂದ 0.483 ಟಿಎಂಸಿ ನೀರಿಗೆ ಬೇಡಿಕೆ ಬಂದಿದ್ದು, ಇದನ್ನು ಅನುಮೋದಿಸಲಾಗುವುದು.

5. ಪ್ರಸಕ್ತ ಬಿಜಾಪುರ ಜಿಲ್ಲೆ ಅಡಿಯಲ್ಲಿನ ಗ್ರಾಮಗಳ ರೈತರ ಹಾಗೂ ಜನರು ಮತ್ತು ಜಾನುವಾರುಗಳಿಗೆ ಅಗತ್ಯ ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಬಿಜಾಪೂರ ಜಲ್ಲೆಯ 16 ಕೆರೆಗಳು ಮತ್ತು 5 ಬಾಂದಾರಗಳಿಗೆ ನೀರನ್ನು ತುಂಬಿಸುವ ಯೋಜನೆಯ ಟರ್ನ್ ಕೀ ಆಧಾರಿತ ಕಾಮಗಾರಿಯನ್ನು ಡಿಸೆಂಬರ್ 2008ರಲ್ಲಿ ರೂ.108.99 ಕೋಟಿ ಮೊತ್ತಕ್ಕೆ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಾರಂಭಗೊಂಡಿರುತ್ತದೆ. ಇದರಿಂದಾಗಿ ಕೆರೆಗಳ ಸುತ್ತಮುತ್ತಲಿನ ಗ್ರಾಮಗಳ ಜೊತೆಗೆ ಕೆರೆಯ ವ್ಯಾಪ್ತಿಗೆ ಒಳಪಟ್ಟಂತಹ ಅಚ್ಚುಕಟ್ಟು ಪ್ರದೇಶಕ್ಕೂ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಇವುಗಳಲ್ಲದೆ, ಯೋಜನಾ ಪ್ರದೇಶದ ಅಚ್ಚುಕಟ್ಟು ವ್ಯಾಪ್ತಿಯಲ್ಲಿನ ಕಾಲುವೆ ಜಾಲದಿಂದ ಸುತ್ತಮುತ್ತಲಿನ ರೈತರು, ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಪಡೆಯುತ್ತಿರುತ್ತಾರೆ.

6. ಭೀಮಾ ನದಿಯಿಂದ ನೀರನ್ನು ಎತ್ತಿ ಸಂಕ ಲಿಫ್ಟ್ ಮುಖಾಂತರ 4 ಕೆರೆಗಳನ್ನು ರೂ.16.05 ಕೋಟಿ ಅಂದಾಜು ಮೊತ್ತದ ಮತ್ತು ಇಂಡಿ ತಾಲ್ಲೂಕಿನ ಅಣಚಿ ಲಿಫ್ಟ್ ಮುಖಾಂತರ 8 ಕೆರೆಗಳನ್ನು ತುಂಬುವ ರೂ.23.12 ಕೋಟಿ ಹಾಗೂ ಬುಯ್ಯಾರ ಲಿಫ್ಟ್ ಮುಖಾಂತರ 7 ಕೆರೆಗಳಿಗೆ ರೂ.24.45 ಕೋಟಿಗಳ ಒಟ್ಟಾರೆ 19 ಕೆರೆಗಳನ್ನು ತುಂಬುವ ಯೋಜನೆಗೆ ಸರ್ವೆ ಮತ್ತು ತನಿಖಾ ಕಾರ್ಯ ಕೈಗೊಳ್ಳಲು ಆದೇಶಿಸಿದಂತೆ ಸರ್ವೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಕೆಲಸ ಪ್ರಗತಿಯಲ್ಲಿರುತ್ತದೆ.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಅಡಿ ಪ್ರಮುಖ ಏತ ನೀರಾವರಿ ಯೋಜನೆಗಳ ಅನುಷ್ಠಾನ ಕುರಿತಂತೆ ಮತ್ತು ಅಗತ್ಯ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಅಗತ್ಯವಾದ ಮತ್ತು ರಚನಾತ್ಮಕವಾದ ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಅಧ್ಯಕ್ಷರು :- ಎ.ಎಸ್. ಪಾಟೀಲರೆ, ಸಚಿವರು ಬಹಳ ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) :- ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ಸಮಸ್ಯೆ ಇದೆ. ನನ್ನನ್ನು ತಡೆಯಬೇಡಿ. ಸನ್ಮಾನ್ಯ ಸಚಿವರ ಉತ್ತರ

ನೋಡಿದರೆ ಕೃಷ್ಣಾ ಭಾಗ್ಯ ಜಲ ನಿಗಮ ಬಂದಮೇಲೆ ಬಹುಶ: ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿರುವ ಪಟ್ಟಿಯನ್ನೇ ಅವರು ಕೊಟ್ಟಿದ್ದಾರೆನಿಸುತ್ತದೆ. ಅವರು ಹಿಂದಿನ ಎಲ್ಲಾ ಪಟ್ಟಿ ಕೊಟ್ಟಿದ್ದಾರೆ. ಇಲಾಖೆಯಿಂದ ಕೂಡ ನಾವು ತೆಗೆದುಕೊಂಡಿರುವುದು ಇದೆ. ನನ್ನ ಮುಖ್ಯ ಪ್ರಶ್ನೆ ಏನೆಂದರೆ, ನಮ್ಮ ಬಿಜಾಪುರ ಜಿಲ್ಲೆ ಬಹುಶ: ಕರ್ನಾಟಕದ ಇತಿಹಾಸದಲ್ಲಿಯೇ ಬರಗಾಲ ಪ್ರದೇಶವಾಗಿದೆ. ಈ ದೇಶದಲ್ಲಿಯೇ ಬರಗಾಲದಲ್ಲಿರುವ ಮೂರು ಜಿಲ್ಲೆಗಳೆಂದರೆ ಆಂಧ್ರಪ್ರದೇಶದಲ್ಲಿರುವ ಅನಂತಪುರ, ರಾಜಸ್ಥಾನದ ಜೈಸಲ್ಮೇರ್ ಮತ್ತು ಕರ್ನಾಟಕದ ಬಿಜಾಪುರ ಜಿಲ್ಲೆ. ಈ ಬಗ್ಗೆ ನಾವು ಮಧ್ಯ ಯುಗದ ಕಾಲದ ಇತಿಹಾಸದ ದಾಖಲೆಗಳಲ್ಲಿ ನಾವು ನೋಡಬಹುದು. ಬ್ರಿಟಿಷರ ಕಾಲದಲ್ಲಿ ಕೂಡ ಈ ಜಿಲ್ಲೆಗೆ ನೀರು ಕೊಡಬೇಕೆಂದು ಒಂದು ಯೋಜನೆಯನ್ನು ತಯಾರಿಸಿದ್ದರು. ಅದರ ನಂತರ ಬಹುಶ: ಹಿಂದಿನ ಗಾಡ್ಗೀಳ್ ಎನ್ನುವಂಥವರು ಮತ್ತು ಅನೇಕ ರೈತಪರ ಸಂಘಟನೆಗಳು, ಮಠಾಧೀಶರು, ಇವತ್ತು ಆಡಳಿತ ಪಕ್ಷದಲ್ಲಿರುವ ನಮ್ಮ ಶಾಸಕರು ಕೂಡ ಇದಕ್ಕೆ ಪ್ರಬಲವಾದ ಹೋರಾಟವನ್ನು ಪಕ್ಷಾತೀತವಾಗಿ ಮಾಡಿದ್ದಾರೆ. ತಾವು ಸನ್ಮಾನ್ಯ ಸಭಾಧ್ಯಕ್ಷರು ಕೂಡ ಆ ಸಭೆಯಲ್ಲಿದ್ದು ತೀರ್ಮಾನ ತೆಗೆದುಕೊಂಡಿರುವ ಎಲ್ಲಾ ದಾಖಲೆಗಳು ನನ್ನಲ್ಲಿವೆ. ಆದರೆ, ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳು ಕಳೆದರೂ ಕೂಡ ಈ ದೇಶದಲ್ಲಿ ರಚನೆಯಾದ ಮೂರು ಜಿಲ್ಲೆಗಳಿಗೆ ಇವತ್ತಿಗೂ ಕುಡಿಯುವ ನೀರನ್ನು ಕೊಡಲಿಕ್ಕೆ ಆಗಿಲ್ಲವೆಂದರೆ ನಿಜವಾಗಿಯೂ ಇದು ನೋವಿನ ಸಂಗತಿ. ಆದರೆ, ಆಲಮಟ್ಟಿ ಡ್ಯಾಂ ಬಂದ ನಂತರ ನಮ್ಮ ಜಿಲ್ಲೆಗೆ ನೇರಾವರಿಯಾಗುತ್ತದೆ, ನಾವು ಬರಗಾಲದಿಂದ ಕೊನೆಗೊಳ್ಳುತ್ತೇವೆ ಎನ್ನುವ ಜಿಲ್ಲಾ ರೈತರ ಕನಸು ಏನಿತ್ತು, ಆ ಕನಸು ರಾಜಕೀಯ ವ್ಯವಸ್ಥೆಯಿಂದಾಗಿ ಇವತ್ತು ಸಂಪೂರ್ಣವಾಗಿ ವಿಫಲವಾಗಿದೆ. ನಮ್ಮ ಜಿಲ್ಲೆಗೆ ನೀರನ್ನು ಕೊಡುವ ಬಗ್ಗೆ ವಾಸ್ತವಿಕ ಸಂಗತಿ ತಮಗೆ ಈಗ ತಿಳಿದು ಬರುತ್ತದೆ. ಸನ್ಮಾನ್ಯ ಸಚಿವರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರು 2 ತಿಂಗಳ ಹಿಂದೆ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಸನ್ಮಾನ್ಯ ಸಚಿವರು A, B scheme ನಲ್ಲಿ ಬರುವ ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ನಮ್ಮ ಸರ್ಕಾರ ಪ್ರಾರಂಭ ಮಾಡುತ್ತದೆ, ಅದನ್ನು ಸಂಪೂರ್ಣಗೊಳಿಸುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ, ಜಿಲ್ಲಾ ಜನತೆಗೆ ಇನ್ನೊಂದು ಸಲಹೆ ನೀಡಿದ್ದಾರೆ. ಬಹುಶ: ಆ ಸಲಹೆ ಅವರ ಬಾಯಿಂದ ಹೇಗೆ ಬಂತೋ ಗೊತ್ತಿಲ್ಲ. ಬೇಸಿಗೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ನೀರಿನ ತೊಂದರೆಯಾಗುತ್ತದೆ, ನೀವೆಲ್ಲರೂ ಕೂಡ ನೀರನ್ನು ತುಪ್ಪದಂತೆ ಬಳಸಬೇಕೆಂದು ಮಾನ್ಯ ಸಚಿವರು

ಹೇಳಿದ್ದಾರೆ. ಮಹಾಸ್ವಾಮಿ, ಈ ಸರ್ಕಾರ ನಮ್ಮ ಜಿಲ್ಲೆಯ ಜನರಿಗೆ ಸಲಹೆ ಕೊಡುತ್ತಿದೆ. ನಿಮಗೆ ಕುಡಿಯಲಿಕ್ಕೆ ನೀರು ಕೊಡುವುದಕ್ಕೆ ನೀರು ಇಲ್ಲ, ನೀವು ನೀರು ಪಡೆಯುವುದಕ್ಕೆ ಅರ್ಹರಲ್ಲ, ನೀರನ್ನು ತುಪ್ಪದಂತೆ ಬಳಸಿ ಎಂದು ಮಾನ್ಯ ಸಚಿವರು ಸಲಹೆ ನೀಡಿದ್ದಾರೆ. ತಮ್ಮ ಹೇಳಿಕೆಯೇ ಇದೆ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ತಮ್ಮ ಪ್ರಶ್ನೆಗೆ ನಾನು ಸುದೀರ್ಘವಾಗಿ ಉತ್ತರ ಕೊಟ್ಟಿದ್ದೇನೆ. ಇದಕ್ಕೆ ಸೀಮಿತವಾಗಿ ಉಪಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು. ನನ್ನ ಪತಿಕಾ ಹೇಳಿಕೆಯನ್ನು ನೀವು ತಿರುಚಿ ಹೇಳಿದರೆ ಸದನದಲ್ಲಿ ತಪ್ಪು ಮಾಹಿತಿ ಹೋಗುತ್ತದೆ. ನೀವೇ ಹಲವಾರು ಪ್ರಶ್ನೆಗಳನ್ನು ಹಾಕಿ ಬೇಸಿಗೆ ಕಾಲದಲ್ಲಿ ನೀರಿನ ತೊಂದರೆಯಾಗುತ್ತಿದೆ ಎಂದು ಹೇಳಿದ್ದೀರಿ. ಅದಕ್ಕೆ ನೀರನ್ನು ಸದ್ಬಳಕೆ ಮಾಡಿ ಎನ್ನುವ ಉದ್ದೇಶದಿಂದ ಹೇಳಿದ್ದೇನೆಯೇ ಹೊರತಾಗಿ ಅದನ್ನು ವಿಪರೀತವಾಗಿ ಅರ್ಥಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ನೀವೇನು ವಿಷಯ ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ಸಂಬಂಧಿಸಿದಂತೆ ಉಪಪ್ರಶ್ನೆ ಕೇಳಿ ಅದಕ್ಕೆ ಉತ್ತರ ನೀಡುತ್ತೇನೆ.

ಅಧ್ಯಕ್ಷರು :- ಎ.ಎಸ್. ಪಾಟೀಲರೆ, ತಮ್ಮ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಏನಾದರೂ ಸ್ಪಷ್ಟೀಕರಣ ಇದ್ದರೆ ಕೇಳಿ. ನಿಮ್ಮ ಸಲಹೆ ಇದ್ದರೆ ಹೇಳಿ. ಸಲಹೆ ಕೊಟ್ಟು ಇದು ಆಗಬೇಕೆಂದು ನೀವು ಹೇಳಿ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ :- ಪಾಟೀಲರೆ, ಇದರ ಬಗ್ಗೆ ಪೂರ್ಣ ಪ್ರಮಾಣದ ಚರ್ಚೆಯಾದರೆ ಅದಕ್ಕೆ ಉತ್ತರ ಕೊಡಲು ನಾನು ಸಿದ್ಧನಿದ್ದೇನೆ. ಈ ವಿಷಯವನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಚರ್ಚೆಯಲ್ಲಿ ಎಲ್ಲರೂ ಭಾಗವಹಿಸೋಣ. ನೀರಾವರಿ ವಿಷಯ ಅತ್ಯಂತ ಮಹತ್ವವಾದ ವಿಚಾರವಾಗಿದೆ. ನಾನು ನಿಮ್ಮ ಸಲಹೆಗಳನ್ನು ಸ್ವಾಗತ ಮಾಡುತ್ತೇನೆ. ಅದರಲ್ಲಿ ರಾಜಕೀಯ ಬೆರೆಸುತ್ತಿದ್ದೀರಿ. ಅದಕ್ಕೂ ನಾವು ತಯಾರಿದ್ದೇವೆ. ಆದ್ದರಿಂದ, ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶವಿದೆ. ಇದು ಗಮನ ಸೆಳೆಯುವ ಸೂಚನೆಯಾಗಿದೆ. ಆದ್ದರಿಂದ, ಇದಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) :- ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆಯಾಗಬೇಕು. ಸರ್ಕಾರಕ್ಕೆ ನಿಜವಾಗಿಯೂ ಉತ್ತರ ಕರ್ನಾಟಕದ ಬಗ್ಗೆ ಕಳಕಳಿ ಇದ್ದರೆ ಇದರ ಬಗ್ಗೆ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ :- ನಾವು ಚರ್ಚೆಗೆ ಸಿದ್ದರಿದ್ದೇವೆ. (ಗೊಂದಲ) ಸಂಪೂರ್ಣವಾಗಿ ನೀವು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲು ನಾನು ಸಮರ್ಥನಿದ್ದೇನೆ, ಸಿದ್ಧವಾಗಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಯೋಜನಾ ಮತ್ತು ಸಾಂಖ್ಯಿಕ ಮತ್ತು ಸಣ್ಣ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೆ, ನಾನು ಕೃಷ್ಣಾ ನದಿ ಹರಿಯುವ ಪ್ರದೇಶದಲ್ಲಿ ಹುಟ್ಟಿದ್ದೇನೆ. ನನ್ನ ಮಾತನ್ನು ತಾವು ಮೊದಲು ಕೇಳಬೇಕು. ದಯವಿಟ್ಟು ಈ ವಿಚಾರದಲ್ಲಿ ಮಾತನಾಡುವುದಕ್ಕೆ ನನಗೂ ಅವಕಾಶ ಕೊಡಿ.

ಅಧ್ಯಕ್ಷರು :- ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಲಿ. ನಂತರ, ತಾವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಎ.ಎಸ್.ಪಾಟೀಲರ ಪ್ರಶ್ನೆ ಏನಿದೆ, ಅದನ್ನು Calling attention ರೂಪದಲ್ಲಿ ಹಾಕಿದ್ದಾರೆ. ಅವರು ಹೊಸಬರು. ಅದನ್ನು ಒಂದೇ sentence ನಲ್ಲಿ ಕೇಳಿ ಕುಳಿತುಕೊಳ್ಳಿ ಎಂದರೆ ಸ್ವಲ್ಪ ಕಷ್ಟವಾಗುತ್ತದೆ. ಅವರ ಅನಿಸಿಕೆ ಏನಿದೆ ಅದನ್ನು ಕೇಳಿಕೊಳ್ಳಿ. ತಾವು 6 ಪುಟಗಳ ದೀರ್ಘವಾದ ಉತ್ತರ ಕೊಟ್ಟಿದ್ದೀರಿ. ಚಿಮ್ಮಲಗಿ, ಮುಳವಾಡ ಏತನೀರಾವರಿ, ಗುತ್ತಿ ಬಸವಣ್ಣ ಇರಬಹುದು, ಇವೆಲ್ಲದರ ಬಗ್ಗೆ ಆಮೇಲೆ ನೀವು ಸ್ಪಷ್ಟೀಕರಣ ಕೊಡಿ. ನಾವೂ ಆಮೇಲೆ ಇದಕ್ಕೆ ಈ ಸಲ ಎಷ್ಟು ಹಣ ಇಟ್ಟಿದ್ದೀರಿ? ನಿಮ್ಮ ಪ್ರಭಾವವನ್ನು ಮುಖ್ಯಮಂತ್ರಿಗಳ ಮೇಲೆ ಬೀರಿ ಎಷ್ಟು ಹಣವನ್ನು irrigation ಗಾಗಿ ಈ project ಗಳಿಗೆ ಈ ಸಲ ಇಟ್ಟುಕೊಂಡಿದ್ದೀರಿ ಎಂದು ಕೇಳುತ್ತೇವೆ. ಈ ವಿಷಯದ ಮೇಲೆ ಆಮೇಲೆ ಮಾತನಾಡೋಣ. ಅವರಿಗೆ ಸ್ವಲ್ಪ ಅವಕಾಶ ಮಾಡಿಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ :- ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಮೊದಲು ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು :- ಬಾಗಲಕೋಟೆ ಶಾಸಕರು Rule 69 ಅಡಿಯಲ್ಲಿ ಬಾಗಲಕೋಟೆ, ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಕುಡಿಯುವ ನೀರು ಮತ್ತು ನೀರಾವರಿ ಯೋಜನೆಗಳ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಇವೆಲ್ಲವನ್ನೂ ಕ್ರೋಡೀಕರಣ

ಮಾಡಿ ನಿಯಮ 69ರಡಿಯಲ್ಲಿ ತೆಗೆದುಕೊಳ್ಳುತ್ತೇನೆ. ಅದರಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡಬಹುದಲ್ಲವೇ?

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) :- ಮಾನ್ಯ ಅಧ್ಯಕ್ಷರೆ, ದಯಮಾಡಿ Rule 69 ಪ್ರಕಾರ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ :- Rule 69 ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಿ. ಈ ವಿಷಯದ ಚರ್ಚೆಗೆ ಒಂದು ದಿವಸ ಪೂರ್ಣವಾಗಿ ಇಡಿ. ಉತ್ತರ ಕರ್ನಾಟಕದ ಬೆಳಗಾಂನಲ್ಲಿ ಅಧಿವೇಶನ ನಡೆಸುತ್ತಿದ್ದೇವೆ. ನೀರಾವರಿ ಯೋಜನೆಗಳು ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಮಹಾರಾಜರ ಆಡಳಿತಕ್ಕೆ ಮುಗಿದು ಹೋಗಿವೆ. ಕಳೆದ 45 ವರ್ಷಗಳಿಂದ ಆಗಬೇಕೆಂದು ನಾವು ಅಡಿಗಲ್ಲನ್ನು ಹಾಕಿಕೊಂಡು ಕುಳಿತಿದ್ದೇವೆ. ಆಲಮಟ್ಟಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲು ಇಡಲು 1964ರಲ್ಲಿ ಅಂದಿನ ಪ್ರಧಾನಿ ಲಾಲ್‌ಬಹಾದ್ದೂರ್ ಶಾಸ್ತ್ರಿಯವರು, ಶ್ರೀಮತಿ ಇಂದಿರಾಗಾಂಧಿಯವರನ್ನು ಕರೆಸಿ ಬಂಗಾರದಲ್ಲಿ ತೂಗಿಸಿದ್ದು ಇಡೀ ವಿಶ್ವದಲ್ಲಿ ಯಾರೂ ಅಲ್ಲ.

ಅದಕ್ಕೆ ಅಂದಿನಿಂದ ಇಂದಿನವರೆಗೆ ಚರ್ಚೆಯಾಗಬೇಕು. ಪ್ರತಿ ವರ್ಷ ಯಾವ್ಯಾವ ಸರ್ಕಾರದಲ್ಲಿ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ ಎನ್ನುವುದನ್ನೂ ಕೂಡ ಹೇಳಬೇಕು. ಅದಕ್ಕಾಗಿ ಈ ಬಗ್ಗೆ ಒಂದು ದಿನ ಪೂರ್ತಿ ಚರ್ಚೆಗೆ ಅವಕಾಶ ಕೊಡಿ. ಆಗ ಇಲ್ಲಿ ಅಧಿವೇಶನ ಮಾಡಿದ್ದು ಅರ್ಥಪೂರ್ಣವಾಗುತ್ತದೆ.

ಅಧ್ಯಕ್ಷರು :- ಇದನ್ನು ನಿಯಮ 69 ಗೆ ಕನವರ್ಟ್ ಮಾಡೋಣ ಬಿಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಹಿಂದಿನ ಸರ್ಕಾರದವರು ಮಾಡಿಲ್ಲವೆಂದರೆ ಈಗ ನೀವು ಮಾಡುವುದಿಲ್ಲವೆ?

ಅಧ್ಯಕ್ಷರು :- ಪಾಟೀಲ್‌ರೆ, ನಾಡಗೌಡರವರೆ, ಈ ವಿಷಯವನ್ನು 69 ರ ಮೇಲೆ ತೆಗೆದುಕೊಳ್ಳೋಣ.

ಶ್ರೀ ಶ್ರೀಕಾಂತ ಕುಲಕರ್ಣಿ :- ನಮ್ಮ ಭಾಗದ ಶಾಸಕರೆಲ್ಲರೂ ಈ ಬಗ್ಗೆ ಮಾತನಾಡಬೇಕಾಗಿದೆ. ಹೀಗಾಗಿ ಹೆಚ್ಚಿನ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು :- ಪಾಟೀಲ್‌ರೆ, ಈಗ ನೀವು ಇದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಕೇಳಿಬಿಡಿ. ನಂತರ ಇದನ್ನು 69 ರಲ್ಲಿ ವಿವರವಾಗಿ ಚರ್ಚೆ ಮಾಡುವುದಕ್ಕೆ

ತಗೆದುಕೊಂಡಾಗ ಎಲ್ಲಾ ಶಾಸಕರು ಇದರಲ್ಲಿ ಭಾಗವಹಿಸಬಹುದು. ಹೀಗಾಗಿ ನೀವು ಏನಾದರೂ ಸ್ಪಷ್ಟೀಕರಣ ಕೇಳಿಬಿಡಿ, ಇದನ್ನು ಮುಗಿಸೋಣ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ :- ಮಾನ್ಯ ಸಚಿವರು ಒಂದು ಮಾತು ಹೇಳಿದರು. ಆ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು :- 69 ರಲ್ಲಿ ತೆಗೆದುಕೊಂಡಾಗ ಎಲ್ಲರೂ ಮಾತನಾಡಬಹುದು. ಈಗ ಬೇಡ ಬಿಡಿ. ನೀವು ಮಾತನಾಡಿದರೆ ಪುನ: ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಸಿ.ಎಸ್.ನಾಡಗೌಡ ಅಪ್ಪಾಜಿ :- ನಾನು ಏನು ಹೇಳುತ್ತೇನೆಂದರೆ, ಮಾನ್ಯ ಸಚಿವರು ಹೇಳುವಾಗ ಸಂಪೂರ್ಣ ಚರ್ಚೆಯಾಗಲಿ, ಯಾರ ಕಾಲದಿಂದ ಏನಾಗಿದೆ, ಏನಾಗುತ್ತಾ ಬಂದಿದೆ ಈ ಬಗ್ಗೆ ಚರ್ಚೆಯಾಗಲಿ ಎಂದು ಹೇಳಿದರು. ಈಗ ಏನಾಗಿದೆ ಎನ್ನುವದಕ್ಕಿಂತ ಹೆಚ್ಚಾಗಿ ಮುಂದೆ ಏನಾಗಬೇಕು ಎನ್ನುವುದು ಬಹಳ ಮುಖ್ಯವಿದೆ. ಅದನ್ನು ಬಿಟ್ಟು ಹಿಂದಿನ ರಾಜಕಾರಣ ಹೇಳುವುದು ಬೇಡ. ಇದಕ್ಕೆ ಮುಖ್ಯ ಕಾರಣ ಬಿಜಾಪುರ, ಬಾಗಲಕೋಟೆ, ಮುಳುಗಡೆಯಾಗಿರುವುದರಿಂದ..

ಶ್ರೀ ಗೋವಿಂದ ಎಂ ಕಾರಜೋಳ :- ರಾಜಕಾರಣ ಮಾಡುತ್ತಿಲ್ಲ.

ಅಧ್ಯಕ್ಷರು :- ಅದನ್ನು ಬಿಡಿ.

ಶೀ ಸಿ.ಎಸ್.ನಾಡಗೌಡ ಅಪ್ಪಾಜಿ :- ಅದಕ್ಕೆ ನಾನೇನು ಹೇಳುತ್ತೇನೆ, ಸರ್ಕಾರ ಇದಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದೆ? ಅದು ಇನ್ನು ಪೂರ್ತಿಗೊಳಿಸಬೇಕಾಗಿದೆ. ಇದರಲ್ಲಿ ಎಲ್ಲರ ಉದ್ದೇಶ ಒಂದೇ ಇದೆ. ನಮಗೆ ಸಂಪೂರ್ಣ ನೀರಾವರಿ ಯೋಜನೆ ಆಗಬೇಕು ಅಷ್ಟೆ.

ಶ್ರೀ ಗೋವಿಂದ ಎಂ ಕಾರಜೋಳ :- 1964 ರಿಂದ 2008 ರವರೆಗೆ ಏನೇನಾಗಿದೆ ಎಂಬ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು :- ಅಯಿತು ಬಿಡಿ. ಪಾಟೀಲ್‌ರೆ ನೀವು ಏನಾದರೂ ಸ್ಪಷ್ಟೀಕರಣ ಕೇಳುತ್ತೀರಾ? ನಿಯಮ 69 ನಲ್ಲಿ ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ, ಸುದೀರ್ಘವಾಗಿ ಚರ್ಚೆ ಮಾಡೋಣ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ :- ನಮ್ಮ ಜಿಲ್ಲೆಯ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ 'ನಮ್ಮ ಎಲ್ಲಾ ಶಾಸಕರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ. ನಾವೆಲ್ಲರೂ ಒಂದಾಗಿ ಇದಕ್ಕೆ ಒಮ್ಮತದ ಹೋರಾಟವನ್ನು ಮೊದಲಿನಿಂದಲೂ ನಮ್ಮ ಹಿರಿಯರು ಮಾಡಿಕೊಂಡು ಬಂದಿದ್ದಾರೆ. ಇವತ್ತು ಕೂಡ ಮಾಡುತ್ತಿದ್ದೇವೆ. ಸನ್ಮಾನ್ಯ ಸಚಿವರು ಹೇಳಿದಂಥ ಮಾತನ್ನು ನಾನು ಒಪ್ಪುತ್ತೇನೆ. ಇದನ್ನು ರೂಲ್ 69 ನಲ್ಲಿ ತೆಗೆದುಕೊಂಡು ನಮಗೆ ಅವಕಾಶ ಕೊಡುತ್ತೀರಿ ಎನ್ನುವ ಮಾತನ್ನು ಹೇಳುತ್ತಾ, ಕೊನೆಯದಾಗಿ ಮೂರು ಉಪ ಪ್ರಶ್ನೆಗಳನ್ನು ಕೇಳುತ್ತೇನೆ. ನಾನು ಮುಂದಿನ ಚರ್ಚೆಗೆ ಹೋಗುವುದಿಲ್ಲ, ಚರ್ಚೆಯ ಸಂದರ್ಭದಲ್ಲಿ ನಾನು ಅವರ ಹತ್ತಿರ ಚರ್ಚಿಸುತ್ತೇನೆ. ತಾವು ಈ ಚಿಮ್ಮಲಗಿ ಏತ ನೀರಾವರಿಗೆ ಬಹುಶ: 2007 ರಲ್ಲಿ ಒಂದು ಟೆಂಡರ್‌ನ್ನು ಕರೆದಿದ್ದೀರಿ. ಆಗ ಹೆಡ್‌ವರ್ಕ್ ಮತ್ತು ಕಾಲುವೆ ಕಾಮಗಾರಿಗಳನ್ನು ಕೂಡ ಸೇರಿಸಿ ಆ ಟೆಂಡರ್‌ನಲ್ಲಿ ಕರೆದಿತ್ತು. ಆದರೆ, ತಾವು ಮೊನ್ನೆ ಬಿಜಾಪುರ ಜಿಲ್ಲೆಯಲ್ಲಿ ರೈತರು ಪಾದಯಾತ್ರೆ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ತಾವು ತಕ್ಷಣ, 5ನೇ ತಾರೀಕು ಪ್ರಾರಂಭವಾಗಿದೆ. 6 ನೇ ತಾರೀಕು ಪುನ: 2007 ರಲ್ಲಿ ರದ್ದಾಗಿದ್ದ ಟೆಂಡರ್‌ನ್ನು 2009 ಅಂದರೆ ಎರಡು ವರ್ಷಗಳ ನಂತರ ತಾವು ಟೆಂಡರ್ ಕರೆದಿದ್ದೀರಿ. ಅದರಲ್ಲಿ ಕೇವಲ ಹೆಡ್ ವರ್ಕ್‌ಗೆ ಮಾತ್ರ ಟೆಂಡರ್ ಕರೆದಿದ್ದೀರಿ, ಕಾಲುವೆ ಕಾಮಗಾರಿಗಳ ಬಗ್ಗೆ ಚಕಾರ ಎತ್ತಿಲ್ಲ. ಅದರ ಬಗ್ಗೆ ನಾನು ಸ್ಪಷ್ಟೀಕರಣ ಕೇಳುತ್ತೇನೆ. ಎರಡನೆಯದಾಗಿ, ಇಂಡಿ ಲಿಫ್ಟ್ ಇರೀಗೇಷನ್ (ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ) ಬಗ್ಗೆ 97.30 ಕಿ.ಮೀ. ನಿಂದ 102 ಕಿ.ಮೀ. ರವರೆಗೆ ಕಾಮಗಾರಿ ನಡೆದಿದೆ, ಬಹುಶ: ಇದು ಸುಮಾರು ಎರಡು ವರ್ಷಗಳಿಂದ ಕಾಮಗಾರಿ ನಡೆಯುತ್ತಿದೆ. ಇವತ್ತಿಗೂ ಆ ಕಾಮಗಾರಿ ಪೂರ್ಣವಾಗಿಲ್ಲ. ಏಕೆಂದರೆ, ನಾನು ಈ ಬಗ್ಗೆ ಅಧಿಕಾರಿಗಳಿಗೆ ಕೇಳಿದರೆ ಅವರು ಹೇಳುತ್ತಾರೆ, ಇದಕ್ಕೆ ಹಣ ಬಿಡುಗಡೆ ಮಾಡಿಲ್ಲ ಹೀಗಾಗಿ ನಾವು ಅದನ್ನು ಸಂಪೂರ್ಣ ಮಾಡಲಿಕ್ಕೆ ಆಗಿಲ್ಲ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಮೂರನೇಯದಾಗಿ, ಮುಳವಾಡ ಬಿ ಸ್ಕೀಂನ ಬಗ್ಗೆ ತಾವೇನು ಹೇಳಿದಿರಿ, ಟೋಪೋಗ್ರಾಫಿಕಲ್ ಸರ್ವೆ ಮಾತ್ರ ಕರೆದಿದ್ದೀರಿ, ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ಟೋಪೋಗ್ರಾಫಿಕಲ್ ಸರ್ವೆಯ ಜೊತೆಗೆ ಡಿಟೇಲ್ಸ್ ಸರ್ವೆ ಆಗಬೇಕಾಗುತ್ತದೆ. ಏಕೆಂದರೆ, 2011 ಇಸ್ವಿಂಒಳಗಾಗಿ ಕೃಷ್ಣಾ ನ್ಯಾಯಾಧೀಕರಣದ ತೀರ್ಪು ಬರುವುದರೊಳಗಾಗಿ ನಿಮ್ಮ ಹತ್ತಿರ ಈ ಬಗ್ಗೆ ಎಲ್ಲಾ ಪ್ರಾಜೆಕ್ಟ್ ರೆಡಿ ಇರಬೇಕಾಗುತ್ತದೆ. ಇದನ್ನು ಕೂಡ ಸರ್ವೆ ಕರೆಯಬೇಕಾಗುತ್ತದೆ. ಈ

ಮೂರು ಉಪ ಪ್ರಶ್ನೆಗಳನ್ನು ಕೇಳುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರು ಮುಂದಿನ ಚರ್ಚೆಯಲ್ಲಿ ನಮಗೆ ಹೆಚ್ಚಿನ ಅವಕಾಶ ಕೊಡುತ್ತಾರೆಂದು ತಿಳಿದುಕೊಂಡು ನಾನು ಮೂರು ಪ್ರಶ್ನೆಗಳನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ನಾನು ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು :- ರೇವಣ್ಣನವರೆ ಬೇಡ ಬಿಡಿ. ಎಲ್ಲರೂ ಇದರಲ್ಲಿ ಭಾಗವಹಿಸಿದರೆ ಹೇಗೆ? ರೂಲ್ 69 ರಲ್ಲಿ ಅವಕಾಶ ಕೊಟ್ಟಾಗ ಮಾತನಾಡಬಹುದಲ್ಲವೆ?

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಕಾರಜೋಳರವರು ಈ ವಿಷಯ ಪ್ರಸ್ತಾಪಿಸಿದ್ದಾರೆ. ಉತ್ತರ ಕರ್ನಾಟಕದ ಜನತೆಯ ಬಹುದಿನದ ಕನಸು ಇದೆ, ಇವತ್ತು ಎರಡನೆ ಬಾರಿ ಇಲ್ಲಿ ಅಧಿವೇಶನ ನಡೆಯುತ್ತಿದೆ. ಮಾನ್ಯ ಕಾರಜೋಳರವರು ಒಂದು ಮಾತು ಹೇಳಿದರು. ಹಿಂದೆ ಲಾಲ್ ಬಹೂದ್ದೂರ್ ಶಾಸ್ತ್ರಿಗಳವರು ಅಡಿಗಲ್ಲು ಹಾಕಿದ್ದರು. ಅಲ್ಲಿಂದ ಇಲ್ಲಿಯವರೆಗೆ ಏನೇನು ಆಗಿದೆ ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ನಿಗದಿ ಪಡಿಸಿ ಎಂದು ಹೇಳಿದ್ದಾರೆ. ಬೇಕಾದರೆ ಬೇರೆ ಎಲ್ಲಾ ವಿಷಯವನ್ನು ಕಟ್-ಅಪ್ ಮಾಡಿ ನಾಳೆ ಬೆಳಿಗ್ಗೆಯಿಂದ ನೀರಾವರಿಗೆ ಏನೇನು ಆಗಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟು ಒಂದು ನಿರ್ಣಯ ಮಾಡಬೇಕೆಂದು ನಮ್ಮ ಮನವಿ.

ಶ್ರೀ ಬಸವರಾಜ ಬೊಮ್ಮಾಯಿ :- ಮಿತ್ರರಾದ ಎ.ಎಸ್.ಪಾಟೀಲ್‌ರವರು ಎತ್ತಿರುವ ಉಪ ಪ್ರಶ್ನೆಗೆ ಉತ್ತರಿಸುವುದಾದರೆ, ಚಿಮ್ಮಲಗಿ ಏತ ನೀರಾವರಿ ಯೋಜನೆಯಲ್ಲಿ ಹೆಡ್ ವರ್ಕ್‌ಗೆ ಈಗಾಗಲೇ 33.8 ಕೋಟಿಗೆ ಟೆಂಡರ್‌ನ್ನು ಕರೆಯಲಾಗಿದೆ. ಮತ್ತು ಆ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಮಾಡುತ್ತೇವೆ. ಕೆನಾಲ್ ವರ್ಕ್ ಬಗ್ಗೆ ಅವರು ಕೇಳಿದ್ದಾರೆ. ಚಿಮ್ಮಲಗಿ ಏತ ನೀರಾವರಿ ಯೋಜನೆಯಲ್ಲಿ ವೆಸ್ಟ್ ಮೇನ್ ಕೆನಾಲ್ 54 ಕಿ.ಮೀ. ಏನಿದೆ, ಬಸವನ ಬಾಗೇವಾಡಿ ಮತ್ತು ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ಸುಮಾರು 4,314 ಹೆಕ್ಟೇರ್‌ನಲ್ಲಿ ನೀರಾವರಿ ಏನಾಗುತ್ತಿದೆ, ಅದರಲ್ಲಿ ಈಗ 0 ನಿಂದ 20 ಕಿ.ಮೀ. ವೆಸ್ಟ್ ಮೇನ್ ಕೆನಾಲ್‌ನಲ್ಲಿ ಇದಕ್ಕೆ ಈಗಾಗಲೇ ತಾಂತ್ರಿಕ ಮತ್ತು ಎಲ್ಲಾ ಅನುಮೋದನೆಯನ್ನು ಕೊಡಲಾಗಿದೆ. ಇನ್ನೊಂದು ಎರಡುವಾರದೊಳಗೆ ಟೆಂಡರ್‌ನ್ನು ಕರೆಯುತ್ತಿದ್ದೇವೆ. ಮಾರ್ಚಿನಲ್ಲಿ ಮುಗಿದ ತಕ್ಷಣ ಆ ಕಾಮಗಾರಿ ಕೂಡ ಪ್ರಾರಂಭಿಸುತ್ತೇವೆಂದು ಹೇಳಲಿಕ್ಕೆ ಇಚ್ಚಿಸುತ್ತೇನೆ. ಮುಂದಿನ ರೀಚ್ ಏನು ಇದೆ, ಮತ್ತು ಈಸ್ಟ್ ಕೆನಾಲ್ ಇದರ ಸಂಪೂರ್ಣವಾಗಿ ಡಿಟೇಲ್

ಇನ್‌ವೆಸ್ಟಿಗೇಷನ್ ಮತ್ತು ಡಿಟಿಪಿ ಎಲ್ಲವನ್ನೂ ಕೂಡ ಸಿದ್ಧತೆ ಮಾಡಲಿಕ್ಕೆ ಈಗಾಗಲೇ ನಾವು ಆಜ್ಞೆ ಮಾಡಿದ್ದೇವೆ. ಮುಂದಿನ ಹಣಕಾಸಿನ ವರ್ಷದಲ್ಲಿ ಮುಂದುವರೆದಂತಹ ಕಾಮಗಾರಿ ಮತ್ತು ಈಸ್ಟ್ ಕೆನಾಲ್‌ನಲ್ಲಿ ಆಗುವಂಥ ಕಾಮಗಾರಿಗಳನ್ನೂ ಕೂಡ ನಾವು ಪ್ರಾರಂಭಿಸುತ್ತೇವೆಂದು ಹೇಳಲಿಕ್ಕೆ ಇಚ್ಚಿಸುತ್ತೇನೆ. ಇದಲ್ಲದೆ ಎರಡನೇ ಉಪ ಪ್ರಶ್ನೆಯಲ್ಲಿ ತಾವು ಇಂಡಿ ಏತ ನೀರಾವರಿ ಯೋಜನೆಯ ಬಗ್ಗೆ ಕೇಳಿದಿರಿ. ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯಡಿಯಲ್ಲಿ 97 ರಿಂದ 102 ಕಿ.ಮಿ. ರವರೆಗೆ ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿದೆ. ಇದಕ್ಕೆ ಬೇಕಾಗಿರುವ ಹಣಕಾಸನ್ನು ಒದಗಿಸಿದ್ದೇವೆ. ಅದಕ್ಕೆ ಯಾವುದೇ ರೀತಿಯ ತೊಂದರೆಯಿಲ್ಲ. ಮುಂದುವರೆದಂಥ ಕಾಮಗಾರಿಯಲ್ಲಿ ಅದು 102 ರಿಂದ 128 ಕಿ.ಮೀ. ಒಟ್ಟು 147 ಕಿ.ಮೀ. ಇದೆ. ಆದರೆ ಪ್ರಥಮ ಹಂತದಲ್ಲಿ 102 ರಿಂದ 128 ಕಿ.ಮೀ.ಅನ್ನು ಕೈಗೆತ್ತಿಕೊಳ್ಳಬೇಕೆಂದು ಸರ್ಕಾರ ತೀರ್ಮಾನಿಸಿದೆ. 97 ರಿಂದ 102 ಕಿ.ಮೀ. ನಲ್ಲಿ ಬರುವಂಥ ಡಿಸ್ಟ್ರಿಬ್ಯೂಟರಿ 41, 42, 53, ಲ್ಯಾಟೆರಲ್ಸ್, FIC's ಎಲ್ಲವೂ ಸೇರಿ ಮುಂದುವರಿದಂಥ ಕಾಮಗಾರಿ 102 ರಿಂದ 128 ಕಿ.ಮೀ. ಲ್ಯಾಟೆರಲ್ಸ್, FIC's ಎಲ್ಲವೂ ಸೇರಿ 145 ಕೋಟಿ ರೂಪಾಯಿ ಅಂದಾಜನ್ನು ಈಗಾಗಲೇ ತಯಾರಿಸಿದ್ದೇವೆ. ಎಲ್ಲಾ ಅನುಮೋದನೆಯನ್ನು ತೆಗೆದುಕೊಂಡಿದ್ದೇವೆ. ಕ್ಯಾಬಿನೆಟ್ ಮುಂದೆ ಅತಿ ಶೀಘ್ರದಲಿ ಬರಲಿದೆ, ಅದನ್ನು ಅನುಮೋದನೆಯನ್ನು ಕೊಟ್ಟು ಮುಂದಿನ ಹಣಕಾಸು ವರ್ಷದಲ್ಲಿ ಈ ಕೆಲಸವನ್ನು ಪ್ರಾರಂಭಿಸುತ್ತೇವೆಂದು ಈ ಸದನಕ್ಕೆ ಮತ್ತು ಈ ಸದನದ ಮುಖಾಂತರ ಬಿಜಾಪುರದ ಜನಗಳಿಗೆ ನಾನು ತಿಳಿಸಲಿಕ್ಕೆ ಇಚ್ಚಿಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ :- ಸನ್ಮಾನ್ಯ ಸಚಿವರೆ,

ಶ್ರೀ ಬಸವರಾಜ್ ಬೊಮ್ಮಾಯಿ :- ಒಂದೇ ನಿಮಿಷ. ಬಹಳ ಅವಸರ ಮಾಡುತ್ತೀರಿ. ನೀವು ಮೂರು ಉಪ ಪ್ರಶ್ನೆ ಕೇಳಿದಿರಿ. ನಾನು ಉತ್ತರಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ :- ನೀವು ಅವರಿಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟ ಮೇಲೂ ಟೈಂ ವೇಸ್ಟ್ ಮಾಡಿದರೆ ಹೇಗೆ?

ಅಧ್ಯಕ್ಷರು:- ಟೈಂ ವೇಸ್ಟ್ ಎಂದರೆ ಹೇಗೆ? ಹಾಗಾದರೆ ನೀರಾವರಿ ಯೋಜನೆಯ ಬಗ್ಗೆ ಮಾತನಾಡುವುದು ಟೈಂ ವೇಸ್ಟ್ ಎಂದರೆ ಇನ್ನೇನು ಮಾಡಬೇಕು? ಹಾಗಾದರೆ ಇಲ್ಲಿಗೆ ಮುಗಿಸಿ ಬಿಡೋಣವೆ? ಏನಾದರೂ ಅನಾವಶ್ಯಕ ಚರ್ಚೆ ಮಾಡಿದರೆ ನಾನು ಕಂಟ್ರೋಲ್ ಮಾಡುತ್ತೇನೆ. ಪುಟ್ಟೇಗೌಡರವರು ಈ ರೀತಿ ಮಾತನಾಡಿದರೆ ಹೇಗೆ?

ಅಧ್ಯಕ್ಷರು:- ಅವರು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡುತ್ತಿದ್ದಾರಷ್ಟೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ಯಾರಿಗಾದರು ಅವಕಾಶ ಕೊಟ್ಟಿದ್ದೇನೆಯೇ?

ಶ್ರೀ ಬಸವರಾಜ ದೊಮ್ಮಾಯಿ :- ಮಾನ್ಯ ಅಧ್ಯಕ್ಷರೆ, ಸ್ಕೀಂ-ಎ ಯಲ್ಲಿ ಎರಡು ಸ್ಟೇಜ್ ಬರುತ್ತವೆ. ಎರಡು ಸ್ಟೇಜ್‌ನ ಬಹುತೇಕ ಕಾಮಗಾರಿಗಳು ಇವತ್ತು ಮುಗಿದಿದೆ. ಮತ್ತೆ ಸ್ಕೀಂ-ಎ ಯಲ್ಲಿ 21346 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಪಟ್ಟ ಕಾಮಗಾರಿ ಬಹುತ್ತೇಕ ಮುಗಿಯುತ್ತಾ ಬಂದಿದೆ. ಸ್ಕೀಂ-ಬಿ ಯಲ್ಲಿ ಲಿಫ್ಟ್ ಇರಿಗೇಷನ್ ಇದೆ. ಇದರಲ್ಲಿ ಒಟ್ಟು 2,27,969 ಹೆಕ್ಟೇರ್ ಪ್ರದೇಶದ ಬಹಳ ದೊಡ್ಡ ಯೋಜನೆ ಸ್ಕೀಂ-ಬಿ ಯಲ್ಲಿ ಬರುತ್ತಿದೆ. ಈಗಾಗಲೇ ಸರ್ವೆ ರಿಪೋರ್ಟ್ ಕೊಟ್ಟಿದ್ದೇವೆ. ಮಾನ್ಯ ಶಾಸಕರ ಸಲಹೆಯಂತೆ ಫೋಟೋಗ್ರಾಫಿಯಲ್ಲದೆ ಇದರ ಸಂಪೂರ್ಣ ಸರ್ವೆ ಮಾಡಿಸಿ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರು ಮಾಡುತ್ತೇವೆ. ಇಡೀ ಸದನಕ್ಕೆ ಗೊತ್ತಿರುವಂತೆ ಇದು ಸ್ಕೀಂ-ಬಿಯಲ್ಲಿ ಬರುತ್ತದೆ. ಇವತ್ತಿನ ದಿವಸ ಟ್ರಿಬ್ಯುನಲ್‌ನ ಪ್ರೊಸಿಡಿಂಗ್ಸ್ ಕೂಡ ನಡೆಯುತ್ತಿದೆ. ಆದ್ದರಿಂದ, ಇದರ ಬಗ್ಗೆ ಸೂಕ್ಷ್ಮವಾಗಿ ಹೇಳುವುದಕ್ಕೆ ಬಯಸುತ್ತೇನೆ. ಟ್ರಿಬ್ಯುನಲ್‌ನ ಹಿಂದಿನ ಆದೇಶಗಳು ಏನಿವೆ, ಅದರಲ್ಲಿ ಕೆಲವು ಆದೇಶಗಳನ್ನು ಬಳಕೆ ಮಾಡುತ್ತೇವೆ. ಕರ್ನಾಟಕ v/s ಆಂಧ್ರಪ್ರದೇಶ ಗೆ ಸಂಬಂಧಪಟ್ಟಂತೆ 2006ರಲ್ಲಿ ಆದೇಶ ಬಂದಿದೆ. ಇದರಲ್ಲಿ ಆಂಧ್ರಪ್ರದೇಶದವರು ನಮ್ಮ ಸರ್ಪ್ಲಸ್ ನೀರನ್ನು ಬಳಸುತ್ತೇವೆಂಬುದರ ಬಗ್ಗೆ ಆದೇಶ.. ..

ಅಧ್ಯಕ್ಷರು:- ಬೇಗ ಮುಗಿಸಿ. ಏಕೆಂದರೆ ಇದರ ಬಗ್ಗೆ ಮತ್ತೆ ನಿಯಮ 69ರಲ್ಲಿ ಚರ್ಚೆ ಮಾಡಬೇಕಾಗಿದೆ.

ಶ್ರೀ ಬಸವರಾಜ ದೊಮ್ಮಾಯಿ:- ಆ ಆದೇಶವನ್ನು ಬಳಕೆ ಮಾಡಿ ಸ್ಕೀಂ-ಬಿ ಯಲ್ಲಿರುವಂಥ ಯೋಜನೆಗಳ ಬಗ್ಗೆ ಟ್ರಿಬ್ಯುನಲ್ ಮುಂದೆ ಹೋಗಿ ಅನುಮತಿಯನ್ನು ಪಡೆದು ಮುಳವಾಡ ಯೋಜನೆಯನ್ನು ಸ್ಕೀಂ-ಬಿ ಯಲ್ಲಿ ಅನುಷ್ಠಾನ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.